

ಅಥವಾ ಬಿಎಂಟಿಸಿಯ ಯಾರೋ ಇದನ್ನು ಓದಿ, ಚಿತ್ರವನ್ನು ನೋಡಿ, ಯಾರೋ ಅಧಿಕಾರಿಗೆ ಹೇಳಿರಬೇಕು. ಯಾರೋ ತುರ್ತಾಗಿ ವರ್ಕ್ ಆರ್ಡರ್ ಹೊರಡಿಸಿರಬೇಕು. ಯಾರೋ ನಡುರಾತ್ರಿಯಲ್ಲಿ ಯಾವುದೋ ಜೆಸಿಬಿಯನ್ನೋ, ಕಾರ್ಮಿಕ ಪಡೆಯನ್ನೋ ಕಳಿಸಿರಬೇಕು. ಯಾರೋ ಪುಣ್ಯಾತ್ಮನ ತಂಡ,ಈ ಕಂಬವನ್ನು ಸರಿಸಿ ಹೊರಳಿಸಿ ಹೋಗಿದೆ. ಟ್ರಾಫಿಕ್‌ಗೆ ತೊಂದರೆ ಆಗದಂತೆ ಇಷ್ಟೇ ಇಷ್ಟು ಸರಿಸಿ ಹೋಗಿದ್ದಾರೆ. ಅಷ್ಟಾದರೂ ಆಯ್ತಲ್ಲ, ಸಾಕು!

ಹಾಗಿದ್ದರೆ ಮುಂದಿನ ಕಥೆ ಏನು?

ಮೈತುಂಬ ದೂಳು, ಕೆಸರು ಮೆತ್ತಿಕೊಂಡು, ಕಿಸೆಯಲ್ಲೆಲ್ಲ ಖಾಲಿ ಗುಟ್ಕಾ ಪ್ಯಾಕೆಟ್‌ಗಳನ್ನು ತುಂಬಿಕೊಂಡು ಫುಟ್‌ಪಾತ್ ಮೇಲೆ ಹೊರಳಾಡುತ್ತಿರುವ ಕುಡುಕರನ್ನು ಈ ನಗರದ ಅಲ್ಲಲ್ಲಿ ಕಾಣುತ್ತಿರುತ್ತೇವೆ. ಇದೂ ಸದ್ಯಕ್ಕೆ ಅದೇ ಸ್ಥಿತಿಯಲ್ಲಿದೆ. ಮುಂದೆಂದಾದರೂ ಅದು ಮೈಕೊಡವಿ ಎದ್ದು ನಿಂತು ಈ ಥಳಥಳಿಸುವ ಅಂಧೇರಿ ನಗರಿಯ ಮಂತ್ರಿಮಾಲ್ ವೃತ್ತಕ್ಕೆ ಬೆಳಕು ತೋರಬಹುದು.

ಅದೂ ಡೌಟೇ. ಅದನ್ನು ಎತ್ತಿ ನಿಲ್ಲಿಸಲು ಹೋದರೆ ಇನ್ನೇನೇನು ವಿವಾದ ಏಳುತ್ತದೋ? ಏಕೆಂದರೆ ಅಲ್ಲೇ ಪುಟ್ಟ ಟ್ರಾಫಿಕ್ ಐಲ್ಯಾಂಡಿನಲ್ಲಿ ರಾಜೀವ್ ಗಾಂಧಿಯವರ ಮೂರಾಳೆತ್ತರ ಪ್ರತಿಮೆ ಇದೆ. ಅದನ್ನು ಸ್ಥಾನಪಲ್ಲಟ ಮಾಡಬೇಕಾದೀತು. ಪ್ರತಿಮೆಯೇನೋ ಮೂಕಸಮ್ಮತಿ ನೀಡಬಹುದು. ಆದರೆ ರಾ.ಗಾ. ಬೆಂಬಲಿಗರು ಬೆನ್ನಟ್ಟಿ ಬಂದಾರು.

ಈ ಕಂಬವನ್ನು ವರ್ಷಗಳ ಹಿಂದೆ ಇಲ್ಲಿ ಅನಾಥ ಮಲಗಿಸಿ ಹೋದವರನ್ನು ಅಧಿಕಾರಿಗಳು ಅಂದೇ ಬೆನ್ನಟ್ಟಿ ಬೆಂಡೆತ್ತಬೇಕಿತ್ತು. ಅಥವಾ ಅದರ ದುಃಸ್ಥಿತಿಯನ್ನು 'ಪ್ರಜಾವಾಣಿ'ಯಲ್ಲಿ ನೋಡಿದ ತಕ್ಷಣ ಧಾವಿಸಿ, ಸ್ಥಾನಪಲ್ಲಟ ಮಾಡಿದವರನ್ನು ಬೆನ್ನಟ್ಟಿ ಹೋಗಿ ಬೆನ್ನು ತಟ್ಟಬೇಕಿತ್ತು. ಎಷ್ಟೆಂದರೂ ದಾರಿಹೋಕರಿಗೆ ದೀಪ ತೋರುವ ಸಂಗತಿ ಅಲ್ಲವೆ?

ಯಾವುದಕ್ಕೂ ಯಾರಿಗೂ ಬಿಡುವಿಲ್ಲ ಬಿಡಿ.

●